# ಶ್ರೀಮಾತೆ ಶಾರದಾದೇವಿಯವರನ್ನು ನಾನೇಕೆ ಗೌರವಿಸುತ್ತೇನೆ ?

ಡಾ. ಪ್ರಭುಶಂಕರ

*ಶ್ರೀಮಾತೆಯವರನ್ನು ದೇವಿಯಂತೆ ಆರಾಧಿಸುವವರು ಅನೇಕರು. ಅವರ ಆಧ್ಯಾತ್ಮಿಕ ವ್ಯಕ್ತಿತ್ವದಿಂದ ಸ್ಫೂರ್ತಿಯನ್ನು ಪಡೆಯುವವರು ಮತ್ತನೇಕರು. ಅವರ ಉದಾತ್ತ ಮಾನವೀಯ ಗುಣಗಳಿಗೆ ಮಾರುಹೋಗಿ ಅವರನ್ನು ಮೆಚ್ಚುವ ಇನ್ನೊಂದು ಗುಂಪಿಗೆ ಸೇರಿರುವ ಶ್ರೀಯುತ ಪ್ರಭುಶಂಕರ ಅವರು ಕನ್ನಡ ಸಾರಸ್ವತಲೋಕದಲ್ಲಿ ಚಿರಪರಿಚಿತರು ಮತ್ತು ಶ್ರೀರಾಮಕೃಷ್ಣ ಆಶ್ರಮದ ನಿಕಟವರ್ತಿಗಳು.*

ಶ್ರೀಶಾರದಾದೇವಿಯವರಿಗೆ ಸಹಸ್ರಾರು ಜನ ಅಭಿಮಾನಿಗಳಿದ್ದಾರೆ. ಅವರಲ್ಲಿ ಬಹುಮಂದಿ ಅವರ ಆರಾಧಕರು. ಅವರ ಅಭಿಮಾನಿಗಳಲ್ಲಿ ನಾನೂ ಒಬ್ಬ. ಎಷ್ಟೋ ಸಲ, ಅವರ ವಿಷಯದಲ್ಲಿ ನಾನು ಏಕೆ ಗೌರವವನ್ನು ಬೆಳಸಿಕೊಂಡಿದ್ದೇನೆ ಎಂದು ಆಲೋಚಿಸುತ್ತೇನೆ. ಎಪ್ಪತ್ತು ದಶಕಗಳಿಗೂ ಹೆಚ್ಚಿನ ನನ್ನ ಜೀವಿತಾವಧಿಯಲ್ಲಿ ನಾನು ಸಂಪೂರ್ಣ ನಾಸ್ತಿಕ ಹೌದೋ ಅಲ್ಲವೋ, ಆದರೆ ಇಂಗ್ಲಿಷಿನಲ್ಲಿ ಅಗ್ನಾಸ್ಟಿಕ್—ಅಜ್ಞೇಯತಾವಾದಿ—ಎಂದರೆ ದೇವರು ಎನ್ನುವವನು ಇದ್ದಾನೆಯೋ ಇಲ್ಲವೋ ತಿಳಿಯದವನು—ಎನ್ನುತ್ತಾರಲ್ಲ ಆ ಸ್ಥಿತಿಯಲ್ಲಂತೂ ಇದ್ದೇನೆ. ಇಷ್ಟಾದರೂ ಶ್ರೀರಾಮಕೃಷ್ಣ, ಸ್ವಾಮಿ ವಿವೇಕಾನಂದರು ಮತ್ತು ಶಾರದಾದೇವಿಯವರನ್ನು, ಧಾರ್ಮಿಕವಲ್ಲದ ಕೆಲವು ಕಾರಣಗಳಿಗಾಗಿ ನಾನು ಮೆಚ್ಚುತ್ತಾ ಬಂದಿದ್ದೇನೆ.

ನನ್ನ ಮನಸ್ಸನ್ನು ವಿಶ್ಲೇಷಣೆ ಮಾಡುತ್ತಾ ಮಾಡುತ್ತಾ ನನಗೆ ಒಂದು ವಿಷಯ ಸ್ಪಷ್ಟವಾಗಿದೆ. ಜಗತ್ತು ಕಂಡಿರುವ ಮಹಾನ್ ವ್ಯಕ್ತಿಗಳಲ್ಲಿ ಒಬ್ಬರಾದ ಶ್ರೀರಾಮಕೃಷ್ಣರ ಆಧ್ಯಾತ್ಮಿಕ ಪತ್ನಿ ಎನ್ನುವ ಒಂದೇ ಕಾರಣಕ್ಕಾಗಿ ನಾನೇನೂ ಶಾರದಾದೇವಿಯವರನ್ನು ಗೌರವಿಸುತ್ತಿಲ್ಲ ಎಂಬುದೇ ಅದು. ಅವರ ಅನೇಕ ಆರಾಧಕರನ್ನು ನಾನು "ನೀವೇಕೆ ಶಾರದಾದೇವಿಯವರ ಭಕ್ತರಾಗಿದ್ದೀರಿ?" ಎಂದು ಕೇಳಿದರೆ, ಅವರು ಅನೇಕಾನೇಕ ಕಷ್ಟಗಳ ನಡುವೆಯೂ ಶಾಂತರಾಗಿದ್ದರು ಎಂಬುದಕ್ಕೆ, ಎಂದು ಉತ್ತರ ಕೊಡಲು ಪ್ರಯತ್ನಿಸುವುದನ್ನು ಗಮನಿಸಿದ್ದೇನೆ. ಈ ಕಾರಣದಿಂದ ಅವರು ಶಾರದಾದೇವಿಯವರ ವ್ಯಕ್ತಿತ್ವಕ್ಕೆ ಶರಣಾಗಿದ್ದಾರೆ. ಅವರು ನೀಡುವ ಈ ಕಾರಣಕ್ಕಾಗಿ ನಾನು ಶಾರದಾದೇವಿಯವರನ್ನು ಗೌರವಿಸಲಾರೆ. ಏಕೆಂದರೆ ನಾನು ಕಂಡಿರುವ ಅನೇಕ ಗೃಹಿಣಿಯರು ಅವರಷ್ಟೇ ಶಾಂತರಾಗಿ, ಅವರು ಅನುಭವಿಸಿರುವುದಕ್ಕಿಂತ ಅನೇಕ ಪಟ್ಟು ಹೆಚ್ಚಿನ ಕಷ್ಟವನ್ನು ಅನುಭವಿಸಿದ್ದಾರೆ. ಶ್ರೀಮಾತೆಯವರ ಆಧ್ಯಾತ್ಮಿಕ ಮಹಿಮೆಗಾಗಿಯೂ ನನಗೆ ಅವರ ವಿಷಯದಲ್ಲಿ ಗೌರವ ಮೂಡಿಲ್ಲ. ನಾನು ಎಷ್ಟೇ ಕಷ್ಟಪಟ್ಟರೂ ಆಧ್ಯಾತ್ಮಿಕತೆ ಎಂದರೆ ಏನು ಎಂಬುದನ್ನು ಕಿಂಚಿತ್ತಾದರೂ ಅರ್ಥಮಾಡಿಕೊಳ್ಳಲು ಸಾಧ್ಯವಾಗದೆ ಹೋಗಿರುವುದೇ ಅದಕ್ಕೆ ಕಾರಣವಾಗಿರಬಹುದು. ಹೀಗೆ ಆಧ್ಯಾತ್ಮಿಕತೆಗಾಗಿ ಯಾರನ್ನೂ ಗೌರವಿಸಲು ಸಾಧ್ಯವಿಲ್ಲದೆ ಹೋಗಿದ್ದರೂ, ಶಾರದಾದೇವಿಯವರ ವಿಷಯದಲ್ಲಿ ಮಾತ್ರ ವಿಶೇಷ ಗೌರವ ಇರುವುದಕ್ಕೆ ಕಾರಣವೇನಾಗಿರಬಹುದು?

ಶ್ರೀಮಾತೆಯವರು ಹುಟ್ಟಿದ್ದು, ಬೆಳೆದದ್ದು ಕಲ್ಕತ್ತೆಯಿಂದ ದೂರದಲ್ಲಿದ್ದ ಒಂದು ಚಿಕ್ಕ ಹಳ್ಳಿಯಲ್ಲಿ. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗದಲ್ಲಿ ಕಲ್ಕತ್ತೆಯಲ್ಲಿ ಐತಿಹಾಸಿಕವಾದ ಸಾಮಾಜಿಕ ಕ್ರಾಂತಿ ನಡೆಯುತ್ತಿತ್ತು. ಅದು ವಿದ್ಯಾವಂತರಾದ ಎಲ್ಲರಿಗೂ ತಿಳಿದಿರುವುದರಿಂದ ಆ ಕ್ರಾಂತಿ ಸ್ವರೂಪವನ್ನು ಇಲ್ಲಿ ವಿವರಿಸಿಲ್ಲ. ತಾಯಿ ಹುಟ್ಟಿ ಬೆಳೆದ ಜಯರಾಂಬಾಟಿಯು ಇಂಥ ಕ್ರಾಂತಿಯೊಂದು ದೂರದ ಕಲ್ಕತ್ತೆಯಲ್ಲಿ ನಡೆಯುತ್ತಿದೆ ಎಂಬುದನ್ನು ಕನಸಿನಲ್ಲಿಯೂ ಕಂಡಿರಲಿಲ್ಲ. ಕಲ್ಕತ್ತೆಯ ಉಪನಗರವಾದ ದಕ್ಷಿಣೇಶ್ವರವನ್ನೇ ಆ ಹೊಸ ನಾಗರಿಕತೆ ಮುಟ್ಟಿರಲಿಲ್ಲವೆಂದಮೇಲೆ ಇನ್ನು ಜಯರಾಂಬಾಟಿಯ ಮಾತೇನು? ತಮ್ಮ ಹಳ್ಳಿಯಿಂದ ದಕ್ಷಿಣೇಶ್ವರಕ್ಕೆ ಬಂದಮೇಲೂ ಶಾರದಾದೇವಿಯವರು ಇಡೀ ದಿನವನ್ನು ಕಳೆಯುತ್ತಿದ್ದುದು ಕಿಷ್ಕಿಂಧೆಯಂತಹ ಕಿರುಕೋಣೆಯಲ್ಲಿ. ಅಂಥದರಲ್ಲಿ ಅವರಿಗೆ ಶ್ರೀರಾಮಕೃಷ್ಣರ ಬಳಿಗೆ ಬಂದು ಹೋಗುತ್ತಿದ್ದ 'ನಾಗರಿಕ'ರ ಅಭಿಪ್ರಾಯಗಳು ತಿಳಿಯುವ ಸಂಭವ ತೀರ ಕಡಮೆಯಾಗಿತ್ತು. ಅಸಾಧಾರಣ ಬುದ್ಧಿವಂತಳೂ ಧೈರ್ಯಶಾಲಿಯೂ ಆಗಿದ್ದ ಸೋದರಿ ನಿವೇದಿತರಂಥವರೇ ಹೆಣ್ಣುಮಕ್ಕಳನ್ನು ಶಾಲೆಗೆ ತರುವ ಪ್ರಯತ್ನದಲ್ಲಿ ಸೋತು ಹೈರಾಣಾಗಿದ್ದರು. ಅಂಥದರಲ್ಲಿ ಶಾರದಾದೇವಿಯವರಿಗೆ ಸ್ತ್ರೀವಿದ್ಯಾಭ್ಯಾಸದ ಮಹಿಮೆ ತಿಳಿದಿರುವುದು ಹೇಗೆ ಸಾಧ್ಯ?

ಆದರೆ ಶಾರದಾದೇವಿಯವರ ಜೀವನದ ಘಟನೆಗಳನ್ನು ನೋಡಿದರೆ ಅವರಿಗೆ ವಿದ್ಯಾಭ್ಯಾಸಕ್ಕಿರುವ ವಿಮೋಚನಾಶಕ್ತಿಯ ಅರಿವಿತ್ತು ಎಂಬುದು ತಿಳಿಯುತ್ತದೆ. ಅಷ್ಟೇ ಅಲ್ಲ ಸ್ತ್ರೀಶಿಕ್ಷಣವು ಬಾಲ್ಯವಿವಾಹಕ್ಕೆ ಪರ್ಯಾಯ ಎಂಬ ಅರಿವೂ ಅವರಿಗಿತ್ತು ಎಂಬುದೂ ಸ್ಪಷ್ಟವಾಗುತ್ತದೆ. ಸ್ತ್ರೀಯರಿಗೆ, ಅವರಿರುವ ಸ್ಥಿತಿಯಿಂದ ಬಿಡುಗಡೆ ಆವಶ್ಯಕ ಎಂಬುದು ಶಾರದಾದೇವಿಯವರ ಆಶಯವಾಗಿತ್ತು ಎಂಬುದನ್ನು ತೋರಿಸುವ ಘಟನೆಯೊಂದು ಅವರ ಜೀವನಚರಿತ್ರೆಯಲ್ಲಿ ದಾಖಲಾಗಿದೆ. ೧೯೧೨

ನೆಯ ಇಸವಿ ಜೂನ್ ತಿಂಗಳ ೧೫ನೆಯ ತಾರೀಖಿನಂದು ಭಕ್ತೆಯೊಬ್ಬರು ಶ್ರೀಮಾತೆಯವರನ್ನು ಭೇಟಿಮಾಡಿ ಅವರ ಮುಂದೆ ತಮ್ಮ ಕಷ್ಟಗಳನ್ನು ತೋಡಿಕೊಂಡರು: "ಅಮ್ಮ, ನನಗೆ ಐದು ಜನ ಹೆಣ್ಣು ಮಕ್ಕಳಿದ್ದಾರೆ. ಅವರಿಗೆ ಸರಿಯಾದ ವರಗಳು ದೊರಕುತ್ತಿಲ್ಲ. ಆ ಚಿಂತೆಯೇ ನನ್ನನ್ನು ಕಾಡುತ್ತಿದೆ." ಶಾರದಾದೇವಿಯವರು ಕೊಟ್ಟ ಉತ್ತರ ಅಂದಿನ ದಿನಗಳಲ್ಲಿ ಅವರಂತಹ ಮಹಿಳೆಯರಿಂದ ನಿರೀಕ್ಷಿತವಾದದ್ದಲ್ಲ. ಅವರು ಹೇಳಿದರು: "ಅವರ ಮದುವೆ ವಿಷಯದಲ್ಲಿ ಚಿಂತೆ ಏಕೆ? ಅವರಿಗೆ ಸರಿಯಾದ ವರ ಸಿಕ್ಕದಿದ್ದರೆ ಅವರನ್ನು ಸೋದರಿ ನಿವೇದಿತಾಳ ಹೆಣ್ಣುಮಕ್ಕಳ ಶಾಲೆಗೆ ಕಳುಹಿಸು. ಅಲ್ಲಿ ಅವರಿಗೆ ಸರಿಯಾದ ತರಪೇತಿ ದೊರಕುತ್ತದೆ. ಶಾಲೆಯಲ್ಲಿ ಅವರು ಸಂತೋಷವಾಗಿರುತ್ತಾರೆ." ಈ ಅಲೌಕಿಕ ಉತ್ತರದಿಂದ, ಚಿಂತಾಮಗ್ನಳಾದ ಆ ಮಹಿಳೆಗೆ ಸಂತೋಷವಾಗಿರಲಾರದು. ಏಕೆಂದರೆ, ಶ್ರೀಮಾತೆಯವರು ತಮ್ಮ ದಿವ್ಯಶಕ್ತಿಯಿಂದ ಒಳ್ಳೆಯ ವರಗಳನ್ನು ತಮ್ಮ ಹೆಣ್ಣುಮಕ್ಕಳಿಗೆ ದೊರಕಿಸಿಕೊಡುತ್ತಾರೆ ಎಂದು ಆಕೆ ನಿರೀಕ್ಷಿಸಿದ್ದರೆ ಅದರಲ್ಲಿ ಆಶ್ಚರ್ಯವೇನೂ ಇಲ್ಲ. ಆದರೆ ಆಶ್ಚರ್ಯಕರವಾದದ್ದು ಎಂದರೆ ಈ ಸಮಸ್ಯೆಯನ್ನು ಶಾರದಾದೇವಿಯವರು ಪರಿಶೀಲಿಸಿದ ದೃಷ್ಟಿಕೋನ. ಸ್ತ್ರೀಯರನ್ನು ವಿದ್ಯಾಭ್ಯಾಸದ ಮುಖ್ಯವಾಹಿನಿಗೆ ಕರೆತರಲು ಮುಂದೆ ಅನೇಕ ದಶಕಗಳೇ ಬೇಕಾದುವು ಎಂಬುದನ್ನು ಗಮನಿಸಿದರೆ ಶ್ರೀಮಾತೆಯವರು ಇಂತಹ ಆಧುನಿಕ ಎನ್ನಬಹುದಾದ ನಿಲುವನ್ನು ತಾಳಿದ್ದು ಸುಧಾರಕರಿಗೆ ಸಂತೋಷವನ್ನು ತರುವ ಸಂಗತಿಯಾಯಿತು. ತಾನೇ ಸ್ವಯಂ ಅಕ್ಷರವಿದ್ಯೆಯ ವಲಯವನ್ನು ಪ್ರವೇಶಿಸದ, ಸಂಪ್ರದಾಯದ ಸಂಕೋಲೆಯನ್ನು ಹೊತ್ತೇ ಬೆಳೆದ ಗ್ರಾಮೀಣ ಮಹಿಳೆಯೊಬ್ಬರು ಸ್ತ್ರೀವಿದ್ಯಾಭ್ಯಾಸವನ್ನು ಪ್ರತಿಪಾದಿಸಿದ್ದು ಅವರ ವಿಷಯದಲ್ಲಿ ನಾನು ಗೌರವ ತಾಳಲು ಕಾರಣವಾಯಿತು ಎನ್ನಬೇಕು.

'ಕರ್ಮ' ಅಥವಾ ಕೆಲಸವನ್ನು ಕುರಿತು ಅವರು ಹೇಳಿದ ಸೂತ್ರದಂತಹ ಒಂದು ಮಾತು ಧ್ಯಾನಯೋಗ್ಯವಾಗಿದೆ. ಗೀತೆಯಂತಹ ಶಾಸ್ತ್ರಗ್ರಂಥಗಳು 'ಕರ್ಮ'ವನ್ನು ಕುರಿತು ಇನ್ನಿಲ್ಲದಷ್ಟು ಚರ್ಚೆಮಾಡಿವೆ. 'ಕರ್ಮ'ವನ್ನು ಯೋಗ ಎಂದು ಕೂಡ ಕರೆದಿವೆ. ಶ್ರೀರಾಮಕೃಷ್ಣ ಪರಮಹಂಸರನ್ನು ಕಂಡಿದ್ದ ವೃದ್ಧ ಮಹಿಳೆಯೊಬ್ಬರು ಶ್ರೀಮಾತೆಯ ಮುಂದೆ ತಮ್ಮ ಅಹವಾಲನ್ನು ಸಲ್ಲಿಸಿದರು: "ನೋಡಿ, ನಾನು ಜಗತ್ತಿಗೆ ಅಂಟಿಕೊಂಡಿದ್ದೇನೆ. ಹೀಗಾಗಿ ಒಂದಲ್ಲ ಒಂದು ಕೆಲಸದ ಹಿಂದೆ ಓಡುತ್ತಿರುತ್ತೇನೆ." ತಾಯಿ, ತಮಗೇ ವಿಶಿಷ್ಟವಾದ ರೀತಿಯಲ್ಲಿ ಕೆಲಸ ಮಾಡುತ್ತಲೇ ಇರುವುದು ಎಷ್ಟು ಅವಶ್ಯಕ ಎಂಬುದನ್ನು ಒತ್ತಿ ಹೇಳುತ್ತಾರೆ. ಜೊತೆಗೆ ಕರ್ಮಕ್ಕೆ ಅಂಟಿಕೊಂಡು ಇರಲೇಬಾರದು ಎನ್ನುತ್ತಾರೆ: "ಕೆಲಸ ಮಾಡುತ್ತಲೇ ಇರಬೇಕು. ಕರ್ಮದಿಂದ ಮಾತ್ರವೇ ಕರ್ಮದ ಬಂಧನವನ್ನು ಕಿತ್ತೆಸೆಯುವುದು ಸಾಧ್ಯವೇ ಹೊರತು, ಕರ್ಮ ಮಾಡುವುದನ್ನು ತಪ್ಪಿಸಿಕೊಳ್ಳುವುದರಿಂದ ಅಲ್ಲ. ಸಂಪೂರ್ಣ ಅನಾಸಕ್ತಿ ಮುಂದೆ ಸಾಧ್ಯವಾಗುತ್ತದೆ. ಒಂದೇ ಒಂದು ಕ್ಷಣವೂ ಕೆಲಸ ಮಾಡದೆ ಇರತಕ್ಕದ್ದಲ್ಲ."

ತಾಯಿ, ಅತ್ಯಂತ ಸಹಜವಾಗಿ ಹೇಳಿದ ಈ ಮಾತಿನಲ್ಲಿ ಶಾಸ್ತ್ರಪಾಂಡಿತ್ಯದ ವಾಸನೆ ಕಿಂಚಿತ್ತೂ ಇಲ್ಲ. ಆದರೂ ಈ ಹೇಳಿಕೆ ಇಬ್ಬರು ಮಹಾನ್ ವ್ಯಕ್ತಿಗಳ—ಒಬ್ಬರು ಚಾರಿತ್ರಿಕ ವ್ಯಕ್ತಿ, ಮತ್ತೊಬ್ಬರು ಪೌರಾಣಿಕ ವ್ಯಕ್ತಿ—ಮಾತುಗಳನ್ನು ನೆನಪಿಗೆ ತರುತ್ತವೆ. ಒಬ್ಬರು ಶ್ರೀರಾಮಕೃಷ್ಣ ಪರಮಹಂಸರು, ಮತ್ತೊಬ್ಬರು ಶ್ರೀಕೃಷ್ಣ. ಪರಮಹಂಸರು ಹೇಳಿದರು: "ಒಂದು ಮುಳ್ಳನ್ನು ಮತ್ತೊಂದು ಮುಳ್ಳಿನಿಂದ ತೆಗೆಯಬೇಕು. ಆಮೇಲೆ ಎರಡನ್ನೂ ಬಿಸಾಡಿಬಿಡಬೇಕು." ನಿಜ, ಅವುಗಳಲ್ಲಿ ಯಾವುದೊಂದೂ ಮ್ಯೂಸಿಯಂನಲ್ಲಿ ಇಡಬೇಕಾದ ವಸ್ತುವಲ್ಲ! ಶ್ರೀಮಾತೆಯವರು ಅದನ್ನೇ ಒತ್ತಿಹೇಳಿದರು ಮತ್ತು ಅವರ ಸಲಹೆಯ ಉತ್ತರಾರ್ಧ—"ಕೆಲಸವಿಲ್ಲದೆ ಒಂದು ಕ್ಷಣವೂ ಕೂರತಕ್ಕದ್ದಲ್ಲ" ಎಂಬುದು ಗೀತಾವಾಕ್ಯಕ್ಕೆ ನೀಡಿದ ವ್ಯಾಖ್ಯಾನ. ಕೃಷ್ಣನ ಮಾತು ಇದು: **ನ ಹಿ ಕಶ್ಚಿತ್ ಕ್ಷಣಮಪಿ ಜಾತು ತಿಷ್ಠತ್ಯಕರ್ಮಕೃತ್**—"ಯಾರೂ ಒಂದು ಕ್ಷಣವೂ ಕರ್ಮ ಮಾಡದೆ ಇರುವುದು ಸಾಧ್ಯವೇ ಇಲ್ಲದ್ದು."

ಶ್ರೀಮಾತೆಯವರಲ್ಲಿ ನಾನು ಕಂಡ ಮತ್ತೊಂದು ದೊಡ್ಡ ಗುಣ ತಮ್ಮ ತಪ್ಪನ್ನು ತಾವು ತಿದ್ದಿಕೊಂಡದ್ದು. ತಾವು ತಪ್ಪೇ ಮಾಡದಷ್ಟು ದೊಡ್ಡವರು ಎಂದು ಅವರು ತಿಳಿದುಕೊಂಡಿರಲಿಲ್ಲ. ಇದನ್ನು ಪುಷ್ಟೀಕರಿಸಲು ಒಂದು ಇಡೀ ಘಟನೆಯನ್ನೇ ಉಲ್ಲೇಖಿಸಬೇಕಾಗಿದೆ. ಕ್ರಿ.ಶ. ೧೯೧೦ರಲ್ಲಿ ನಡೆದ ಘಟನೆ ಅದು. "ಆ ಸಮಯದಲ್ಲಿ ತಾಯಿಯ ಕೊಠಡಿಯ ಬಾಗಿಲಲ್ಲಿ ಮಧ್ಯ ವಯಸ್ಸಿನ ವ್ಯಕ್ತಿಯೊಬ್ಬರು ಬಂದರು. ಆತ ಹದಿನಾರು ಹದಿನೇಳು ವರ್ಷ ವಯಸ್ಸಿನ ತರುಣಿಯೊಬ್ಬಳನ್ನು ಕೈಹಿಡಿದು ಕರೆದುಕೊಂಡು ಬಂದಿದ್ದರು. ಅವರು ಹೇಳಿದರು: 'ತಾಯಿ, ಇವಳು ನನ್ನ ಮಗಳು. ಈಕೆಯ ಮಗು ಈ ದಿನ ಬೆಳಗ್ಗೆ ತೀರಿಕೊಂಡಿತು. ಈಕೆ ತುಂಬ ದುಃಖದಲ್ಲಿದ್ದಾಳೆ. ಇವಳಿಗೆ ಸಮಾಧಾನ ಹೇಳುತ್ತೀರಿ ಎಂಬ ಭಾವನೆಯಿಂದ ಈಕೆಯನ್ನು ಕರೆದು ತಂದಿದ್ದೇನೆ.' ಈ ಮಾತುಗಳನ್ನು ಕೇಳಿ ನಮಗೆ ಕಳವಳವಾಯಿತು. ತಾಯಿ ಆಕೆಯ ಕಡೆಗೆ ತಿರುಗಿ 'ಬಾ, ಮಗೂ, ಬಾ' ಎಂದರು. ಆ ತರುಣಿ ಕೊಠಡಿಯೊಳಕ್ಕೆ ಬಂದು ತಾಯಿಗೆ ತೀರ ಸಮೀಪದಲ್ಲಿ ಕುಳಿತಳು. ತಾಯಿಗೆ ಪ್ರಣಾಮ ಮಾಡಲು ಆಕೆ ಕೈಚಾಚಿದಾಗ ಅವರು ಸ್ವಲ್ಪ ದೂರ ಹಿಂದಕ್ಕೆ ಸರಿದು ಹೀಗೆಂದರು: 'ಈಕೆ ನನ್ನನ್ನು ಮುಟ್ಟಬಹುದೆ? ಇದು ಅವಳಿಗೆ ಸೂತಕದ ಸಮಯವಲ್ಲವೆ?'"

ತಾಯಿಯವರ ಈ ವರ್ತನೆಯಿಂದ ನಮಗೆ ಆಘಾತವಾಗುತ್ತದೆ. ಶ್ರೀಮಾತೆ ಪಾವಿತ್ರ್ಯ ಮತ್ತು ಪರಿಶುದ್ಧತೆಯ ಸಾಕಾರ. ಆದರೆ ಅವರೇನು ಮಾಡಿಯಾರು? ಅವರು ಬೆಳೆದ ಪರಿಸರದಲ್ಲಿ ದಟ್ಟವಾಗಿ ಹಬ್ಬಿದ್ದ ಮೂಢನಂಬಿಕೆಗಳ ಆವರಣದಿಂದ ಅವರು ಪಾರಾಗಲಾರದೆ ಹೋದರು. ಕೆಲವೊಂದು ಮೂಢನಂಬಿಕೆಗಳನ್ನು ಅವರು ತಿರಸ್ಕರಿಸುವಾಗ ಅವರು ತೋರಿಸಿದ ಧೈರ್ಯವನ್ನು ನೋಡಿ ಆಶ್ಚರ್ಯ, ಮೆಚ್ಚುಗೆಗಳೂ ಮೂಡುತ್ತವೆ. ವಿಧವೆಯ ಉಡುಪನ್ನು ಧರಿಸಲು ಒಪ್ಪದೇ ಹೋದದ್ದೂ

ಚಿನ್ನದ ಬಳೆಗಳನ್ನು ತೆಗೆಯದೇ ಹೋದದ್ದೂ ಸಾಮಾನ್ಯ ಧೈರ್ಯದ ವಿಷಯವಲ್ಲ, ಅದರಲ್ಲೂ ತೀರ ಹಳ್ಳಿಯೇ ಆದ ಕಾಮಾರಪುಕುರದಲ್ಲಿ, ಅದಕ್ಕಿಂತ ಅಷ್ಟೇನೂ ಉತ್ತಮವಲ್ಲದ ದಕ್ಷಿಣೇಶ್ವರದಲ್ಲಿ ಬಾಳಬೇಕಾದ ಸಂದರ್ಭಗಳನ್ನು ನೆನೆದರೆ.

ಮಗುವನ್ನು ಕಳೆದುಕೊಂಡಿದ್ದ ತಾಯಿ ಶ್ರೀಮಾತೆಯವರ ನಡೆನುಡಿಗಳಿಂದ ಇನ್ನೂ ದುಃಖಿತಳಾದಳು. ಆಕೆ ತುಂಬ ಸಂಕೋಚಪಟ್ಟುಕೊಂಡು ತಾಯಿಯವರಿಂದ ಸ್ವಲ್ಪ ದೂರ ಸರಿದಳು. ಆದರೆ ಮುಂದೆ ನಡೆದದ್ದು ನಮಗೆ ಶ್ರೀಮಾತೆಯವರು ಪ್ರಿಯರಾಗುವಂತೆ ಮಾಡುತ್ತದೆ. ಆ ದುಃಖಿತಪ್ತ ತರುಣಿಯ ಮುಖವನ್ನು ನೋಡಿ ಶ್ರೀಮಾತೆಯವರ ಹೃದಯ ಕರುಣಾಸಾಗರವಾಯಿತು. ಅವರು ಹೇಳಿದರು : "ಅಯ್ಯೋ, ನನ್ನ ಕಂದ. ನೀನು ತುಂಬ ಕಷ್ಟ ಅನುಭವಿಸಿದ್ದೀಯೆ. ಬಾ, ಹತ್ತಿರ ಬಾ, ನನ್ನ ಕಾಲುಗಳನ್ನು ಮುಟ್ಟು." ಇಷ್ಟು ಹೇಳಿ ಅವರು ತಾವೇ ಆ ಹೆಣ್ಣುಮಗಳ ಹತ್ತಿರಕ್ಕೆ ಸರಿದರು. ಕಣ್ಣೀರು ಹರಿಯುತ್ತಿದ್ದಂತೆ ಆಕೆ ತನ್ನ ತಲೆಯನ್ನು ಭಕ್ತಿಯಿಂದ ಶ್ರೀಮಾತೆಯವರ ಚರಣಗಳ ಮೇಲೆ ಇಟ್ಟಳು. ಈ ಘಟನೆ ಶ್ರೀಮಾತೆಯವರ ವಿಷಯದಲ್ಲಿ ನಮಗೆ ತಾತ್ಕಾಲಿಕವಾಗಿ ಮೂಡಿದ್ದ ಬೇಸರ, ಅಸಮಾಧಾನಗಳನ್ನು ಹೋಗಲಾಡಿಸಿ ಅವರ ವಿಷಯದಲ್ಲಿ ಗೌರವ ಮೂಡುವಂತೆ ಮಾಡುತ್ತದೆ.

ರಾಷ್ಟ್ರಕವಿ ಕುವೆಂಪುರವರ **ಶ್ರೀರಾಮಾಯಣದರ್ಶನಂ** ಮಹಾಕಾವ್ಯದ ಒಂದು ಘಟನೆಯನ್ನು ನಮಗೆ ಮೇಲಿನ ಪ್ರಸಂಗ ನೆನಪಿಗೆ ತರುತ್ತದೆ. ರಾಮನು ವಾಲಿಯನ್ನು ಮರೆಯಾಗಿ ನಿಂತು ಮೋಸದಿಂದ ಕೊಂದಿದ್ದಾನೆ. ವಾಲಿ ರಾಮನನ್ನು ಅವನ ಈ ಕಾರ್ಯಕ್ಕಾಗಿ ನಿಂದಿಸುತ್ತಾನೆ. ಆಗ ರಾಮ ವಾಲಿಯ ಕ್ಷಮೆ ಕೇಳುತ್ತಾ ಹೇಳುತ್ತಾನೆ:

**ಮನ್ನಿಸೆನ್ನಂ ಮಹಾವೀರ!**
**ಮಾಡಿದ ತಪ್ಪನೊಪ್ಪಿಕೊಳ್ಳದೆ ಲೌಕಿಕದ**
**ಬೀರಕ್ಕೆ ಸಲ್ಲಕ್ಷಣಂ...**

ಎಷ್ಟೇ ದೊಡ್ಡ ವ್ಯಕ್ತಿಯಾದರೂ ತಾವು ಮಾಡಿದ ತಪ್ಪನ್ನು ಒಪ್ಪಿಕೊಳ್ಳುವುದು ಅವರಿಗೆ ಗೌರವ ತರುವಂತಹ ಗುಣ. ಶ್ರೀಮಾತೆ ಹಾಗೆ ಮಾಡಿ ತಮ್ಮ ಸಜ್ಜನಿಕೆಯನ್ನು ಮೆರೆದಿದ್ದಾರೆ.

ನಿಜವಾದ ಆಧ್ಯಾತ್ಮಿಕ ಸಾಧಕರು ಬಂದರೆ ಅವರಿಗೆ ಎಲ್ಲ ಶಾಸ್ತ್ರ-ಸಂಪ್ರದಾಯಗಳನ್ನೂ ಮೀರಿ ನೆರವು ನೀಡುವ ಧೈರ್ಯ ಶ್ರೀಮಾತೆಯವರಿಗಿತ್ತು. ಆ ಧೈರ್ಯದ ಮೂಲ ಅವರಿಗಿದ್ದ ಜೀವಾನುಕಂಪೆ. ಅದರ ಮುಂದೆ ಎಲ್ಲ ಶಾಸ್ತ್ರ-ಸೂತ್ರಗಳೂ ನಿಷ್ಕ್ರಿಯವಾಗುತ್ತವೆ, ಅರ್ಥರಹಿತವಾಗುತ್ತವೆ. ಈ ಮಾತುಗಳಿಗೆ ಭಾಷ್ಯದಂತಿರುವ ಅವರ ಜೀವನದ ಒಂದು ಘಟನೆ ಈ ಮುಂದಿನದು.

ಮಹಿಳಾ ಭಕ್ತೆಯೊಬ್ಬರಿಗೆ ಶ್ರೀರಾಮಕೃಷ್ಣರೂ ಶ್ರೀಮಾತೆಯವರೂ ಕನಸಿನಲ್ಲಿ ದರ್ಶನ ನೀಡಿದ್ದರಂತೆ. ಅಂಥ ಮಹಿಳೆಯ ಮಾತುಗಳಲ್ಲೇ ಈ ಘಟನೆಯ ವಿವರಗಳನ್ನು ಕೇಳಬಹುದು. ಶ್ರೀಮಾತೆಯವರಿಗೆ ಆಕೆ ಹೇಳಿದರು : " ನೀವು ನನಗೆ ಮಂತ್ರದೀಕ್ಷೆ ಕೊಡುತ್ತಿದ್ದಂತೆ ಕನಸು ಬಿತ್ತು. ಆದರೆ ದೀಕ್ಷಾವಿಧಿ ಮುಗಿದಿರಲಿಲ್ಲ. ಆ ಕನಸು ಬಿದ್ದಾಗಿನಿಂದ ನಿಮ್ಮ ಪಾದಕಮಲಗಳಲ್ಲಿ ಆಶ್ರಯ ಪಡೆಯಬೇಕೆಂಬ ಬಯಕೆ ತೀವ್ರವಾಗಿದೆ." ತಾಯಿ ಅನುಗ್ರಹಿಸುವ ಧ್ವನಿಯಲ್ಲಿ ಹೇಳಿದರು: "ಸರಿ, ಇವತ್ತೇ ನಿನಗೆ ಮಂತ್ರದೀಕ್ಷೆ ಕೊಡುತ್ತೇನೆ." ಆ ಮಹಿಳೆ ತಾವು ಇರುವ ಜಾಗದಿಂದ ತುಂಬ ದೂರದಲ್ಲಿ ಇರುವುದನ್ನೂ ತಮ್ಮಿಂದ ಮಂತ್ರದೀಕ್ಷೆಯನ್ನು ಪಡೆಯುವುದನ್ನು ಆಕೆಯ ಗಂಡ ಒಪ್ಪಿರುವುದನ್ನೂ ತಿಳಿದ ಶ್ರೀಮಾತೆಯವರು ಹೇಳಿದರಂತೆ: "ನೀನು ಹೋಗಿ ಕೈಕಾಲು ತೊಳೆದುಕೊಂಡು ಬಾ." ಗಾಬರಿಗೊಂಡ ಆ ಮಹಿಳೆ, "ನಾನು ಇನ್ನೂ ಸ್ನಾನವನ್ನೇ ಮಾಡಿಲ್ಲ" ಎಂದರು. "ಅದೇನೂ ಪರವಾಗಿಲ್ಲ, ನೀನು ಸ್ನಾನ ಮಾಡಬೇಕಾಗಿಲ್ಲ" ಎಂದರು ಶ್ರೀಮಾತೆ. ಅಷ್ಟೇ ಅಲ್ಲ, ಆಗಲೆ ಆಕೆಗೆ ಮಂತ್ರದೀಕ್ಷೆಯನ್ನೂ ನೀಡಿದರು.

ಜನರು ಶ್ರೀಮಾತೆಯವರನ್ನು ಜಗನ್ಮಾತೆ, ಕಾಳಿ ಎಂದೆಲ್ಲ ವರ್ಣಿಸಿದ್ದಾರೆ. ಆದರೆ ಅವರು ನಮ್ಮಂತೆಯೇ ಅತ್ತು, ನಕ್ಕು ಮಾಡುತ್ತಿದ್ದುದರಿಂದ ನಾವು ಅವರ ಬಳಿ ಆತ್ಮೀಯತೆಯಿಂದ ನಡೆದುಕೊಳ್ಳುವುದು ಸಾಧ್ಯವಾಗುತ್ತದೆ. ಒಮ್ಮೆ ಶ್ರೀಮಾತೆಯವರಿಗೆ ತುಂಬ ಅನಾರೋಗ್ಯ ಆಗಿತ್ತು. ಆ ಸಮಯದಲ್ಲಿ ಅವರನ್ನು ನೋಡಿದ್ದ ನಳಿನಿ ಬೆಹಾರಿ ಸರ್ಕಾರ್ ಎಂಬಾಕೆ ಅವರ ಭೇಟಿಯನ್ನು ಹೀಗೆ ದಾಖಲಿಸಿದ್ದಾರೆ : "ಜಯರಾಂಬಾಟಿಯಲ್ಲಿ ತಾಯಿಯವರು ಅಪಾಯಕಾರಿಯಾದ ಒಂದು ಖಾಯಿಲೆಯಿಂದ ನರಳುತ್ತಿದ್ದರು. ನಾನು ಅವರ ಕಾಲುಗಳನ್ನು ಒತ್ತುತ್ತಿದ್ದೆ. ಆಗ ಅವರು ಹೇಳಿದರು : 'ನೋಡು ಮಗು, ಎಷ್ಟೋ ದಿನಗಳಿಂದ ನಾನು ಪ್ರಾರ್ಥನೆ ಮಾಡುತ್ತಿದ್ದೇನೆ. ಆದರೆ ಏನೂ ಪ್ರಯೋಜನವಾಗಿಲ್ಲ. ನಾನು ಎಷ್ಟೊಂದು ಅತ್ತಿದ್ದೇನೆ. ಆದರೆ ಏನೂ ಆಗಿಲ್ಲ.'" ಮುಂದುವರಿದು ನಳಿನಿ ಸರ್ಕಾರ್ ಹೇಳುತ್ತಾರೆ, ಜಗದ್ಧಾತ್ರಿ ಅಂದೇ ಅವರಲ್ಲಿಗೆ ಬಂದಿದ್ದರಂತೆ, ಆದ್ದರಿಂದ ತಮ್ಮ ಖಾಯಿಲೆ ವಾಸಿಯಾಗುವುದು ಖಂಡಿತ ಎಂಬ ಭರವಸೆ ಅವರಿಗಿತ್ತು, ಎಂದು. ಅವರು ಅತ್ತಿದ್ದಂತೆಯೇ ಸಂತೋಷದಿಂದ ನಕ್ಕ ಸಂದರ್ಭಗಳೂ ಎಷ್ಟೋ.

ಸರಳ ಹಳ್ಳಿಯ ಹೆಂಗಸು, ಶ್ರೀಮಂತಿಕೆಯಿಲ್ಲ, ತೋರಿಕೆಯ ನಾಗರಿಕತೆಯಿಲ್ಲ. ಇಡೀ ಸೃಷ್ಟಿಯ ವಿಚಾರಕ್ಕೆ ಅಪಾರವಾದ ಪ್ರೇಮ. ಬೇರೆ ಯಾರೇ ಸ್ತ್ರೀ ಪುರುಷರಂತೆ ನಗು, ಅಳು. ಹೀಗಾಗಿ ಅಸಂಖ್ಯ ಸಾಧಕರಿಂದ ಗೌರವ ಪಡೆದವರಲ್ಲಿ ಆಶ್ಚರ್ಯವೇನೂ ಇಲ್ಲ. ಇಂಥ ಮಹಾಮಹಿಮಳಿಗೆ ಸ್ವಾಮಿ ವಿವೇಕಾನಂದರಂತಹ ಪ್ರಸಿದ್ಧರು ದೀರ್ಘದಂಡ ಪ್ರಣಾಮ ಮಾಡಿದ್ದೂ ಸಹಜ ಕ್ರಿಯೆಯಾಗಿಯೇ ಕಾಣುತ್ತದೆ. ❖

❋ ❋ ❋